**ಮೂ.ದಾ.ನಂ.48/2021**

ಪಿ.ಡಬ್ಲ್ಯು.1

(ಇಂದು ದಿನಾಂಕ: **12-01-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಪಿ.ಜಿ.ಎಚ್. ವಕೀಲರಿಂದಃ**

ವಾದಿಯು ನನ್ನ ತಾಯಿಯಾಗಿರುತ್ತಾರೆ. ವಾದಿಯು ಸಂತೃಪ್ತಿ ಕ್ರೇಡಿಟ್ ಕೋ ಅಪರೇಟಿವ್ ಸೊಸಾಯಟಿಯಲ್ಲಿ ಪಿಗ್ಮಿ ಸಂಗ್ರಹಕಾರರು ಆಗಿರುತ್ತಾರೆ ಎಂದರೆ ಸಾಕ್ಷಿಯು ಅವರು ಮೂರು ವರ್ಷದ ಹಿಂದೆ ಬಿಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯು ಈ ದಾವೆಯನ್ನು ದಾಖಲಿಸುವ ಸಂದರ್ಭದಲ್ಲಿ ಪಿಗ್ಮಿಯನ್ನು ಸಂಗ್ರಹ ಮಾಡುತ್ತಿದ್ದರು ಎಂದರೆ ಸಾಕ್ಷಿಯು ವಾದಿಯು ಬ್ಯಾಂಕಿಗೆ ಹಣವನ್ನು ತುಂಬಲು ಹೋಗುತ್ತಿದ್ದು, ಹಣವನ್ನು ಸಂಗ್ರಹ ನಾನೇ ಮಾಡುತ್ತಿದ್ದೇನು ಎಂದು ನುಡಿಯುತ್ತಾರೆ. ಈ ಕುರಿತಾಗಿ ನಾನು ಸಂತೃಪ್ತಿ ಕ್ರೇಡಿಟ್ ಕೋ ಅಪರೇಟಿವ ಸೊಸಾಯಟಿಯಿಂದ ಯಾವುದೇ ಅಧಿಕಾರ ಪತ್ರವನ್ನು ಪಡೆದುಕೊಂಡಿರುವುದಿಲ್ಲ. ಸಾಕ್ಷಿಯು ಮುಂದುವರಿದು ಅವರು ಪರವಾನಿಗೆಯನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ.

ನನ್ನ ತಾಯಿ ಟಿ.ವಿ.ಎಸ್ ಜ್ಯುಪಿಟರ್ ವನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿಯು ದ್ವಿ ಚಕ್ರ ವಾಹನವನ್ನು ಚಲಾಯಿಸುತ್ತಾರೆ ಎಂದರೆ ಸಾಕ್ಷಿಯು ಈ ಹಿಂದೆ ಚಲಾಯಿಸುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಾಯಿಯು ಈ ಪ್ರಕರಣ ದಾಖಲಾದ ನಂತರದಲ್ಲಿ ನ್ಯಾಯಾಲಯದ ಮುಂದೆ ಹಾಜರ ಇದ್ದರು ಎಂದರೆ ಸರಿಯಲ್ಲ, ನನಗೆ 37 ವರ್ಷ ವಯಸ್ಸಾಗಿರುತ್ತದೆ. ನಾನು ಈ ಮೊದಲು ಕುಮಟಾದ ಎಡಿಎಲ್ಆರ್ ಕಛೇರಿಯ ಪರವಾನಿಗೆ

**ಮೂ.ದಾ.ನಂ.48/2021**

ಪಿ.ಡಬ್ಲ್ಯು.1

ಭೂ ಮಾಪಕ ನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ ಎಂದರೆ ಸರಿ. ನಂತರ ನನ್ನನ್ನು ಕುಮಟಾ ಕಛೇರಿಯಿಂದ ವಜಾ ಮಾಡಿ ಆದೇಶ ಮಾಡಿರುತ್ತಾರೆ ಎಂದರೆ ಸರಿ. ಪ್ರಸ್ತುತ ನಾನು ಹೊನ್ನಾವರದ ಎಡಿಎಲ್ಅರ್ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ ಎಂದರೆ ಸರಿ.

ವಾದಿಗೆ ಪ್ರಸ್ತುತ 63 ವರ್ಷ ವಯಸ್ಸಾಗಿರುತ್ತದೆ. ಅವರು ಆರೋಗ್ಯವಂತ ಆಗಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಅವರಿಗೆ vericous ತೊಂದರೆ ಇದೆ ಎಂದು ನುಡಿಯುತ್ತಾರೆ. ಈ ಕುರಿತಾಗಿ ನಾನು ಯಾವುದೇ ವೈದ್ಯಕೀಯ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ಈ ದಾವೆಯನ್ನು ದಾಖಲಿಸುವ ಸಂದರ್ಭದಲ್ಲಿ ನನ್ನ ವಕೀಲರಿಗೆ ನಾನು ಹಾಗೂ ವಾದಿಯು ಸೇರಿ ಮಾಹಿತಿಯನ್ನು ನೀಡಿರುತ್ತೇವೆ. ದಾವಾ ತಯಾರು ಮಾಡುವ ಸಂದರ್ಭದಲ್ಲಿ ನಾನು ಹಾಗೂ ವಾದಿ ಜೊತೆಯಾಗಿ ಸೇರಿ ಸಂಬಂಧಪಟ್ಟ ಇಲಾಖೆಗೆ ಹೋಗಿ ದಾಖಲೆಗಳನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿ. ನಮ್ಮ ದಾವಾ ಪತ್ರದಲ್ಲಿ ಬರೆದ ವಿಷಯಗಳು ಸರಿಯಾಗಿದೆ ಎಂದು ತಿಳಿದುಕೊಂಡು ನಂತರದಲ್ಲಿ ನಾವು ಸಹಿಯನ್ನು ಹಾಕಿರುತ್ತೇವೆ ಎಂದರೆ ಸರಿ.

ನನ್ನ ತಾಯಿಯು ಹತ್ತನೇ ತರಗತಿಯಲ್ಲಿ ಅನುತ್ತೀರ್ಣಳಾಗಿರುತ್ತಾರೆ. ವಾದಿಗೆ ವ್ಯವಹಾರಿಕ ಜ್ಞಾನ ಇದೆ ಎಂದರೆ ಸಾಕ್ಷಿಯು ಅವರು ಪಿಗ್ಮಿಯನ್ನು ಸಂಗ್ರಹ ಮಾಡಿಕೊಂಡು ಅದನ್ನು ಬ್ಯಾಂಕಿಗೆ ಕಟ್ಟುತ್ತಿದ್ದರು. ಅದನ್ನು ಹೊರತುಪಡಿಸಿ ಬೇರೆ ಜ್ಞಾನ ಇಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ನ್ಯಾಯಾಲಯಕ್ಕೆ ಬಂದರೆ ಸತ್ಯ ಸಂಗತಿಗಳು ಹೊರಗೆ ಬರುತ್ತದೆ ಎಂಬ ಕಾರಣದಿಂದಾಗಿ ನಾನು

**ಮೂ.ದಾ.ನಂ.48/2021**

ಪಿ.ಡಬ್ಲ್ಯು.1

ಆಕೆಯಿಂದ ಜಿಪಿಎ ಯನ್ನು ಪಡೆದುಕೊಂಡು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯ ನುಡಿಯಲು ಶಕ್ತರು ಹಾಗೂ ಸಮರ್ಥರಾಗಿರುತ್ತಾರೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರ ಮೇಲಿನ ದ್ವೇಷದಿಂದ ವಾದಿಯಿಂದ ಜಿಪಿಎಯನ್ನು ಪಡೆದುಕೊಂಡು ನಾನು ಸಾಕ್ಷಿ ನುಡಿಯಲು ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ನನಗೆ ಜಿಪಿಎ ಯನ್ನು ಬರೆದುಕೊಡುವ ಯಾವುದೇ ಸಂಗತಿಗಳು ಉದ್ಭವವಾಗಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಗೆ ಈ ದಾವೆಯ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ತಾಯಿಗೆ ದಾವೆಯ ವಿಚಾರವನ್ನು ತಿಳಿಸದೇ ಅವರಿಂದ ಜಿಪಿಎ ಯನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಈಗಲೂ ಸಹ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಸಮರ್ಥರಿದ್ದಾರೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ